ಚಿತ್ರದುರ್ಗ ಫೆ. 24 :

ನಗರದ ಶ್ರೀ ಜಗದ್ಗುರು ಮುರುಘರಾಜೇಂದ್ರ (ಎಸ್.ಜೆ.ಎಂ.) ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ನೂತನ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಶ್ರೀ ಶಿವಮೂರ್ತಿ ಮುರುಘಾ ಶರಣರು ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು.

ಬ್ಯಾಂಕ್‌ನ ಆವರಣದಲ್ಲಿಂದು ನಡೆದ ಚುನಾವಣೆಯಲ್ಲಿ ಚುನಾವಣಾಧಿಕಾರಿಗಳಾಗಿದ್ದ ರಿಟರ್ನಿಂಗ್ ಆಫೀಸರ್ ಎಸ್.ಮಹಮ್ಮದ್ ಯೂನಸ್ ಪರ್ವೀಜ್ ಅವರು ಅಧ್ಯಕ್ಷರ ಆಯ್ಕೆಯನ್ನು ಅಧಿಕೃತವಾಗಿ ಘೋಷಿಸಿದರು.

ಉಪಾಧ್ಯಕ್ಷರಾಗಿ ಎ.ಜೆ. ಪರಮಶಿವಯ್ಯ, ನಿರ್ದೇಶಕರಾಗಿ ಎಂ.ಜಿ. ದೊರೆಸ್ವಾಮಿ, ಎನ್.ತಿಪ್ಪಣ್ಣ, ಜಗದೀಶ್ ಬಿ.ಎಂ., ಬಿ.ಜಿ.ನಾಗರಾಜ್, ಎನ್.ಗಂಗಾಧರ, ಡಾ॥ ಆರ್.ಗೌರಮ್ಮ, ಡಾ॥ ಸವಿತ, ಪಿ.ವೀರೇಂದ್ರಕುಮಾರ್, ಪ್ರೊ. ಸಿ.ಬಸವರಾಜಪ್ಪ, ಎನ್.ಜಿ.ಶ್ರೀನಿವಾಸ್, ಪ್ರಕಾಶ್ ಹೆಚ್. ಅವರುಗಳು ಆಯ್ಕೆಯಾಗಿದ್ದಾರೆ.

ಬ್ಯಾಂಕಿನ ನೂತನ ಆಡಳಿತ ಮಂಡಳಿ ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಶಿವಮೂರ್ತಿ ಮುರುಘಾ ಶರಣರಿಗೆ ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮಿಗಳು ಅಭಿನಂದಿಸಿದರು. ಈ ಸಂದರ್ಭದಲ್ಲಿ ಬ್ಯಾಂಕಿನ ವ್ಯವಸ್ಥಾಪಕ ರಾಜಶೇಖರ್ ಅವರು ಉಪಸ್ಥಿತರಿದ್ದರು.

